ಮಂಡ್ಯದ ಸಂತೆಕಸಲಗೆರೆ ಪ್ರಕಾಶ್ ವೃತ್ತಿಯಿಂದ ಪತ್ರಕರ್ತರು. ಗ್ರಾಮಭಾರತದ ತವಕತಲ್ಲಣಗಳು, ಆರ್ದ್ರ ಭಾವಗಳನ್ನು ಕಥೆಯಾಗಿಸುವುದರಲ್ಲಿ ಆಸಕ್ತರು. ಜಾನಪದದಲ್ಲೂ ಪ್ರೀತಿಯುಳ್ಳವರು. ಗ್ರಾಮ ಅಧ್ಯಯನ ಕೃತಿ, ಜಾನಪದ ಅಧ್ಯಯನ ಕೃತಿಗಳನ್ನು ಪ್ರಕಟಿಸಿರುವ ಅವರು 'ಮಂಡ್ಯ ಗ್ರಾಮ ಚರಿತ್ರೆ ಕೋಶ'ವನ್ನೂ ರೂಪಿಸಿದ್ದಾರೆ. 'ಪ್ರತಿಮೆ ಇಲ್ಲದ ಊರು', 'ಒಂದು ಸ್ವರ್ಗಕ್ಕಾಗಿ', 'ಕರಗಿ ಹೋದವಳು', 'ಮನುಷ್ಯರನ್ನು ತಿನ್ನುವ ಹುಡುಗ' ಅವರ ಕಥಾ ಸಂಕಲನಗಳು. 'ಕತೆಗೂ ಊರಿಗೂ ಅಪಾರ ನಂಟು' ಈವರೆಗಿನ ಕಥೆಗಳ ಸಂಕಲನ.

ಸೊಸೆಯ ಮುಟ್ಟಿನ ಸ್ಯಾಲೆ ಹೊತ್ತು ಹೋಗಲು ಬಂದಿದ್ದ ಅಗಸಗಿತ್ತಿ ಕಂಡು ಮುತ್ತಜ್ಜಿ ಕೆಂಪಮ್ಮನಿಗೆ ನಿಂತ ನೆಲವೇ ಕುಸಿದಂತಾಯ್ತು. ಮೂಲೆಯಲ್ಲಿ ಕುಂತ ವನಜಾಕ್ಷಿಯೂ ನೀರಿಲ್ಲದೆ ಒಣಗಿದ ಹೊಲದ ಬೆಳೆಯಂತೆ ಕಂಡಳು. ತನ್ನ ಅಸ್ತಿತ್ವದ ಉಳಿವಿಗಾಗಿ ಇನ್ನೆಂಥ ಪ್ರಯತ್ನ ನಡೆಸಬೇಕು ಎಂಬ ಈ ದೀರ್ಘ ಬೇಗುದಿ. ಪರಿಹಾರ ಇಲ್ಲವೇ? ಕಾರಣ ಹುಡುಕುವುದು ವ್ಯರ್ಥ ಪ್ರಯತ್ನ. ಅವಳಿಗಿಂತ ಮುತ್ತಜ್ಜಿ ಕೆಂಪಮ್ಮ ಬಿಡಲಿಲ್ಲ. 'ಯಾವ ಕಲ್ಲುಗವಿಯಲ್ಲಿ ಅವಿತಿದ್ದಿಯಪ್ಪ ಶಿವನೇ' ಎಂದು ದೇವರನ್ನು ಶಪಿಸಿದಳು. ಕೆಂಪಮ್ಮನ ನಿಟ್ಟುಸಿರು ಇಡೀ ಊರಿಗೆ ಅರ್ಥವಾಗಿತ್ತು. ಹತ್ತು ಎಕರೆ ಜಮೀನು, ದೊಡ್ಡಹಟ್ಟಿ ಮತ್ತೊಬ್ಬರ ಪಾಲಾಗುವುದಕ್ಕೆ ಬಿಡಲಾರೆ ಎಂದು ಹಟಕ್ಕೆ ಬಿದ್ದಳು. ಸಾಯೋದರೊಳಗೆ ಈ ಹಟ್ಟಿಯೊಳಗೆ ಮಗುವಿನ ಗೆಜ್ಜೆ ಸಪ್ಪಳ ಕೇಳುತ್ತೇನೋ ಇಲ್ಲವೋ? ವನಜಾಕ್ಷಿಯನ್ನು ಅತ್ಯಂತ ಕನಿಕರದಿಂದ ತಲೆಯನ್ನು ನೇವರಿಸಿ 'ಅಯ್ಯೋ ನನ್ನ ಕಂದ, ನಿಂದಲ್ಲಕವ್ವ ತೆಪ್ಪು ನಂದು' ಎಂದು ಕಣ್ಣೀರಾದಳು.

* * *

ಏನೇ ಆಗಲಿ ನಾನೂ ಕೂಡ ಈ ಹಸಿರು ಹೊಲದಂತಾಗಬೇಕು. ಬಿತ್ತಿದ ಬೀಜವೆಲ್ಲ ಮೊಳಕೆ ಒಡೆಯಬೇಕು. ಗಿಡವಾಗಬೇಕು. ಮರವಾಗಬೇಕು. ಅಲ್ಲಿ ನೋಡು ಎಂಥೆಂಥ ಹೂವು, ಬಳ್ಳಿ, ಅದರ ಸುತ್ತ ಸುತ್ತು ಹಾಕುವ ದುಂಬಿ, ಬಣ್ಣಬಣ್ಣದ ಚಿಟ್ಟೆ, ಅವುಗಳ ಮೋಹಕ್ಕೆ ಬೆರಗಾಗಿ ಹಿಡಿಯಲು ಹೊರಟವಳ ಕಾಲು ಎಡವಿತು. ಆದರೂ ಅವಳು ಹಟ ಬಿಡದೆ ಆ ಚಿಟ್ಟೆ ಹಿಡಿಯಲು ಅದರ ಹಿಂದೆ ಓಡಿದಳು.

ಎಷ್ಟು ಬೆನ್ನತ್ತಿ ಓಡಿದರೂ ಸಿಗದ ಆ ಚಿಟ್ಟೆ, ನಿರಾಸೆಯಿಂದ ಕಡೆಗೆ ಸಿಟ್ಟು ನೆತ್ತಿಗೇರಿತು. ಅಯ್ಯೋ ಇನ್ನೆಷ್ಟು ದೂರ ಓಡಬೇಕು ಎಂದುಕೊಂಡಳು. ಕಾಲುನೋವು ಕಾಣಿಸಿಕೊಂಡಿತು. ಉತ್ಸಾಹದ ಮುಂದೆ ಅವಳ ಎಲ್ಲಾ ನೋವು ಮಾಯವಾಗಿದ್ದವು. ಆದರೂ ತನ್ನ ಕಣ್ಣು, ಹಣೆ ಮೇಲಿನ ಗೆರೆಯನ್ನು ಗುರುತಿಸಿಕೊಂಡಳು. ಅಯ್ಯೋ, ನನಗೂ ವಯಸ್ಸಾಗುತ್ತಿದೆ ಎಂದು ಮರುಗಿದಳು. ಅಜ್ಜಿ ಹೇಳುವ ಹಾಗೆ ಎಲ್ಲವೂ ವಯಸ್ಸಿದ್ದಾಗಲೇ ನಡೆದು ಬಿಡಬೇಕು. ಆಮೇಲೆ ದೇವರು ಮತ್ತು ಅದೃಷ್ಟಕ್ಕೆ ಬಿಟ್ಟ ವಿಚಾರ. ವಿಚಾರವಾದಿಯ ಹಾಗೆ ಚರ್ಚಿಸಿಕೊಂಡಳು. ಈಗ ನನ್ನ ಹೊಟ್ಟೆಯಲ್ಲಿ ಒಂದು ಮಗು ಹುಟ್ಟಬೇಕಿತ್ತು. ಆದೇಕೋ ಅದರ ಸುಳಿವು ನನಗೆ ಕಾಣಿಸುತ್ತಿಲ್ಲ. ಮಡಿಲಿಗೆ ಕಟ್ಟಿಕೊಂಡಿರುವುದು ಬೆಂಕಿಯೋ, ಸಂಪಿಗೆ ಹೂವೋ ಅದನ್ನು ಅನುಭವಿಸಲೇಬೇಕು. ಬೆಂಕಿಯಾದರೆ ಅದರ ಕಾವು ಜೀವಮಾನ ಸುಡುತ್ತಲೇ ಈ ಜಾಗದಿಂದಲೇ ಇನ್ನಿಲ್ಲವಾಗಿಸುವಷ್ಟು ಕಠಿಣ. ಸಂಪಿಗೆ ಹೂ ಎಂದರೆ ಸುಖ, ಅದರಲ್ಲಿ ಮೈಮರೆತು ನಾನೂ ಕೂಡ ಹೂಗಂಧ ಆಗಬೇಕು. ಆದರೆ, ಅದು ಸಂಪಿಗೆ ಕೆಂಡವಾಗಿ ನನ್ನ ಮಡಿಲಿನಲ್ಲಿದೆ. ಏಕೋ ಕಟ್ಟಿದ ಮೋಡವೆಲ್ಲ ನಿಲ್ಲಲಾರದೆ ತೇಲಿ ಹೋಗುತ್ತಿವೆ. 'ಬಾ ಬಾ ಗಿಳಿಯೇ, ಬಣ್ಣದ ಗಿಳಿಯೇ' ಎಂದು ಅದರ ಹಿಂದೆ ಓಡಿದಳು.

* * *

ತನ್ನ ವಯಸ್ಸನ್ನು ಮರೆತ ವನಜಾಕ್ಷಿ ತಾನೇ ಈ ವನ, ಬಯಲು ಎಂದುಕೊಂಡಳು. ಅವಳ ಉತ್ಸಾಹಕ್ಕೆ ಯಾವ ಭಂಗ ಬಂದರೂ ಸಹಿಸದವಳು. ಆದರೂ ಅಜ್ಜಿ ಎದುರಿಗೆ ಸಿಕ್ಕಾಗಲೆಲ್ಲ 'ನೀನೇನೂ ಈಗ ಮೈನೆರೆದ ಹೆಣ್ಣಾ, ತಕಥೈ ಅಂತ ಕುಣಿತೀಯಲ್ಲ' ಎಂದು ಗದರುವಳು. ತನ್ನ ವಯಸ್ಸು ಮತ್ತು ಯೌವ್ವನದ ಮತ್ತನ್ನು ಹೀಯಾಳಿಸಿಬಿಡುವಳು. ಅಜ್ಜಿ ಮಾತಿಗೆ ಬೆಲೆ ಕೊಡದಿದ್ದರೆ ಗಂಡನ ಕಿವಿಗೆ ಬೀಳುತ್ತದೆ. ಅವನೇನೋ ಗುಡುಗು- ಸಿಡಿಲಿನ ಹಾಗೆ,